ಈ) ಬಂದಿರುವುದಿಲ್ಲ.

ಉ) ನಿರ್ದಿಷ್ಟ ಪ್ರಕರಣವು ಸರ್ಕಾರದ ಗಮನಕ್ಕೆ ಬಂದಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.

ಶ್ರೀ ಬಸಂತ ರೆಡ್ಡಿ ಮೋತಕಪಲ್ಲಿ —ಮಾನ್ಯ ಅಧ್ಯಕ್ಷರೆ, ನನ್ನ 'ಅ' ಪ್ರಶ್ನೆಗೆ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರನ್ನು ವರ್ಗಾವಣೆ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆಯೇ ? ಎಂದರೆ, ಸಾರ್ವತ್ರಿಕ ವರ್ಗಾವಣೆಯಲ್ಲಿ ಉಪ ನಿರ್ದೇಶಕರಿಗೆ ಅಧಿಕಾರ ನೀಡಲಾಗಿದೆಯೆಂದು ತಿಳಿಸಿ ಅವಧಿ ಮುಗಿದ ನಂತರ ವರ್ಗಾವಣೆಯ ಅಧಿಕಾರ ಸರ್ಕಾರಕ್ಕೆ ಇರುತ್ತದೆಂದು ತಿಳಿಸಿರುತ್ತಾರೆ. 'ಆ' ಪ್ರಶ್ನೆಗೆ ಸರ್ಕಾರದ ನಿರ್ದೇಶನವನ್ನು ಉಪ ನಿರ್ದೇಶಕರು ಪಾಲಿಸುತ್ತಿಲ್ಲ ಏಕೆ ? ಎಂದರೆ, ಪಾಲಿಸುತ್ತಿದ್ದಾರೆಂದು ಹೇಳಿದ್ದಾರೆ. ನನ್ನ ಕೊನೆ ಪ್ರಶ್ನೆಗೆ ವ್ಯವಸ್ಥೆಯನ್ನು ಸರಿಪಡಿಸಿ ವರ್ಗಾವಣೆ ಆದೇಶಗಳಿಗೆ ಸೂಕ್ತವಾದ ವ್ಯವಸ್ಥೆ ಮಾಡಲಾಗುವುದೆ ? ಎಂದರೆ, ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ ಸೂಕ್ತ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ನಿರ್ದಿಷ್ಟ ಪ್ರಕರಣವನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ನನ್ನ ಕ್ಷೇತ್ರದ ಶಿಕ್ಷಕರ ವರ್ಗಾವಣೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಆದೇಶ ಸಂಖ್ಯೆ ಎಸ್‌ಎಸ್‌ಸಿಎಂ ೭೨೪೭೯-೯೩ ದಿನಾಂಕ ೧೦-೬-೯೩ ರಂದು ದೂರುಗಳಿರುವ ಹಾಗೂ ಕ್ರಿಮಿನಲ್ ಮೊಕದ್ದಮೆಗಳು ಇರುವ ಶಿಕ್ಷಕರನ್ನು ವರ್ಗಾವಣೆ ಮಾಡಲು ಆದೇಶ ನೀಡಿದ್ದರೆ ಮಾನ್ಯ ನಿರ್ದೇಶಕರು, ಬೆಂಗಳೂರು ಇವರು ಸಹಾ ದಿನಾಂಕ ೧೭-೬-೯೩ ರಲ್ಲಿ ಗುಲ್ಬರ್ಗಾ ಉಪ ನಿರ್ದೇಶಕರಿಗೆ ಪತ್ರ ಬರೆದು, ಈ ಶಿಕ್ಷಕರನ್ನು ವರ್ಗಾವಣೆ ಮಾಡಬೇಕೆಂದು ಆದೇಶ ನೀಡಿದ್ದರೂ ವರ್ಗಾವಣೆ ಮಾಡಿಲ್ಲ ಏಕೆ ? ಅಲ್ಲದೆ ಸಾರ್ವತ್ರಿಕ ವರ್ಗಾವಣೆ ಅವಧಿ ಮುಗಿದ ನಂತರವೂ ಸಹಾ ಮಾನ್ಯ ಮುಖ್ಯ ಮಂತ್ರಿಯವರ ಆದೇಶವನ್ನು ಅನುಸರಿಸಿ, ನಿರ್ದೇಶಕರು, ಬೆಂಗಳೂರು ಇವರು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಿಲುಕಿರುವ ಶಿಕ್ಷಕರನ್ನು ವರ್ಗಾವಣೆ ಮಾಡಲು ಪತ್ರ ನಂ. ಸಿಇ ೪೬೯ ಇತರೆ ೭೯-೯೩, ದಿನಾಂಕ ೧೭-೮-೯೩, ಹಾಗೂ ೮-೧೦-೯೩ ರಂದು ಆದೇಶ ಮಾಡಿದ್ದರೂ ಇದನ್ನು ಪಾಲಿಸಿಲ್ಲ ಏಕೆ ? ಈ ಪ್ರಕಾರ ಆದೇಶ ಪಾಲಿಸದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬಹುದೆ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೆ, ಜನರಲ್ ಟ್ರಾನ್ಸ್‌ಫರ್‌ನ್ನು ಮೇ ತಿಂಗಳ ಒಳಗಾಗಿ ಮಾಡಿ ಮುಗಿಸುತ್ತೇವೆ. ಆವಾಗ ಪ್ರೈಮರಿ ಮತ್ತು ಸೆಕೆಂಡರಿ ಸ್ಕೂಲ್ ಟೀಚರ್ಸ್‌ನನ್ನು ವಿತ್ ಇನ್ ದಿ ಡಿಸ್ಟ್ರಿಕ್ಟ್ ವರ್ಗಾವಣೆ ಮಾಡುವುದಕ್ಕೆ ಡಿ.ಡಿ.ಪಿ.ಐ.ಗಳಿಗೆ ಪವರ್ಸ್ ಇದೆ. ಡಿವಿಷನ್ ಒಳಗೆ ಮಾಡುವುದಿದ್ದರೆ ಜಾಯಿಂಟ್ ಡೈರೆಕ್ಟರ್ಸ್ ಮಾಡುತ್ತಾರೆ. ಇಂಟರ್ ಡಿವಿಷನ್ ಮಾಡಬೇಕಾದರೆ ಡಿ.ಪಿ.ಐ. ಮಾಡುತ್ತಾರೆ. ಮತ್ತು ಇನ್ನು ಕೆಲವನ್ನು ಸಿ.ಪಿ.ಐ. ಮಾಡುತ್ತಾರೆ. ವರ್ಗಾವಣೆ ಕಾಲದಲ್ಲಿ ಈ ಅಧಿಕಾರಿಗಳು ಅವರ ವ್ಯಾಪ್ತಿಯೊಳಗೆ ಮಾಡುತ್ತಾರೆ. ಆ ಸಮಯದಲ್ಲಿ ಮೇಲೆ ಏನಾದರೂ ಕಂಪ್ಲೇಂಟ್ ಅಥವಾ ಇನ್ನಿತ್ಯಾದಿ ಕಾರಣದ ಮೇಲೆ ಟ್ರಾನ್ಸ್‌ಫರ್ ಮಾಡಬೇಕಾದರೆ ಅದು ಸಿ.ಪಿ.ಐ. ಗೆ ಮತ್ತು ಸರ್ಕಾರಕ್ಕೆ ಬಂದು ನಂತರ ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ. ತಾವು ಉದಾಹರಣೆಗಳನ್ನು ಕೊಟ್ಟು ಸರ್ಕಾರದಿಂದ ಆದೇಶವಾಗಿದ್ದರೂ ಟ್ರಾನ್ಸ್‌ಫರ್ ಮಾಡಿಲ್ಲವೆಂದು ಹೇಳಿದ್ದೀರಿ, ನಾನು ಇದರ ಬಗ್ಗೆ ರಿಪೋರ್ಟ್ ತರಿಸಿಕೊಂಡು ಲೋಪವಾಗಿದ್ದರೆ ಅದನ್ನು ಸರಿ ಮಾಡುತ್ತೇನೆ.

ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ನಿರ್ವಹಣೆ

೨೮೭ (೮೧೬) ಶ್ರೀ ಎ. ಕೆ. ಆನಂತಕೃಷ್ಣ (ಶಿವಾಜಿನಗರ).—ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆ ಬೆಂಗಳೂರಿಗೆ ಅತಿ ಅಪಕೀರ್ತಿ ತರುವಂತಹ ಹಂತ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ರೋಗಿಗಳ ದೈನಂದಿನ ತುರ್ತು ಅವಶ್ಯಕತೆಗೆ ಬೇಕಾದ ಹಣವು ಆಸ್ಪತ್ರೆಯಲ್ಲಿ ಲಭ್ಯವಿರುವುದಿಲ್ಲ ?

ಇ) ಆಸ್ಪತ್ರೆ ಭೇಟಿ ಮಾಡಿದ ಒಳ ಮತ್ತು ಹೊರ ರೋಗಿಗಳಿಗೆ ಔಷಧ, ಬ್ಯಾಂಡೇಜ್ ಡೆಟಾಲ್, ಇಂಜಕ್ಷನ್ ಕೊಂಡುಕೊಳ್ಳುವುದು ಗಣನೀಯ ಕಷ್ಟವಾಗಿದೆ ?

ಈ) ವೈದ್ಯರು ಮತ್ತು ಸಿಬ್ಬಂದಿಗಳು ಸಾಕಷ್ಟು ಇಲ್ಲದಿರುವುದು ?

ಉ) ಆಂಬುಲೆನ್ಸ್ ವಾಹನವು ದುರಸ್ತಿಯಾಗದಿರುವ ಸ್ಥಿತಿ ?

ಊ) ಕಣ್ಣು, ಕಿವಿ, ಮೂಗು, ಗಂಟಲು, ಮಕ್ಕಳ ರೋಗ, ಆಸ್ಥಿ, ಪ್ರಸೂತಿ ವಿಭಾಗಗಳಲ್ಲಿ ಪರೀಕ್ಷೆಗಾಗಿ ಕನಿಷ್ಟ ಸ್ಥಳಾವಕಾಶ ಮತ್ತು ತೃಪ್ತಿಕರವಾದ ಉಪಕರಣಗಳು ಲಭ್ಯವಿಲ್ಲದಿರುವುದು ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು).—

ಅ) ಇಲ್ಲಾ.

ಆ) ರೋಗಿಗಳ ದೈನಂದಿನ ತರ್ಜ ಅವಶ್ಯಕತೆಗೋಸ್ಕರ ಹಣವನ್ನು ಬೌರಿಂಗ್ ಆಸ್ಪತ್ರೆಗೆ ಬಿಡುಗಡೆ ಮಾಡಲಾಗಿದೆ.

ಇ) ಅತ್ಯಾವಶ್ಯಕ ಔಷಧಿಗಳು ಇಂಜಕ್ಷನ್, ಬ್ಯಾಂಡೇಜ್ ಬಟ್ಟೆಗಳು ಮತ್ತು ಡೆಟಾಲ್ ಇವುಗಳು ಸದರಿ ಆಸ್ಪತ್ರೆಯಲ್ಲಿ ಲಭ್ಯವಿರುತ್ತದೆ. ೧೯೬೩-೬೪ನೇ ಸಾಲಿನಲ್ಲಿ ಔಷಧ ಮತ್ತು ರಾಸಾಯನಿಕ ಬ್ಯಾಂಡೇಜ್ ಮತ್ತು ಡ್ರೆಸ್ಸಿಂಗ್ಸ್ ಸೇರಿಕೊಂಡು ನೇರ ಖರೀದಿಗಾಗಿ ರೂ. ೩೫.೯೧ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಮತ್ತು ೧೯೬೩-೬೪ರ ಸಾಲಿನಲ್ಲಿ ಸರ್ಕಾರಿ ಔಷಧ ಮಳಿಗೆ, ಬೆಂಗಳೂರು, ಇಲ್ಲಿಗೆ ಔಷಧ ಮತ್ತು ರಾಸಾಯನಿಕಗಳನ್ನು ಒದಗಿಸಲು ರೂ. ೫೩.೮೬ ಲಕ್ಷ ಗಳನ್ನು ಬಿಡುಗಡೆ ಮಾಡಲಾಗಿದೆ.

ಈ) ಆಸ್ಪತ್ರೆಯಲ್ಲಿ ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಇರುವುದಿಲ್ಲ. ಬೋಧನಾ ಸಿಬ್ಬಂದಿಯ ಜೊತೆಗೆ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಇಲ್ಲಿನ ೧೭ ಸಹಾಯಕ ಶಸ್ತ್ರಚಿಕಿತ್ಸಕರುಗಳನ್ನು ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ನೇಮಕ ಮಾಡಲಾಗಿದೆ. ಆದಾಗ್ಯೂ ಖಾಲಿ ಇರುವ ಗ್ರೂಪ್-ಡಿ ಸಿಬ್ಬಂದಿಯನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಆಸ್ಪತ್ರೆಯಲ್ಲಿ ಎರಡು ಆಂಬುಲೆನ್ಸ್ ವಾಹನಗಳು ಇರುತ್ತವೆ. ಆದರಲ್ಲಿ ೧) ಮಹೀಂದ್ರ ಆಂಡ್ ಮಹೇಂದ್ರ ೨) ಸ್ವರಾಜ್ ಮಜ್ದಾ. ಆದರೂ ಸ್ವರಾಜ್ ಮಜ್ದಾ ವಾಹನವು ದುರಸ್ಥಿಯಲ್ಲಿದ್ದು, ಇನ್ನೂ ಕೆಲವೇ ದಿನಗಳಲ್ಲಿ ದುರಸ್ಥಿಯ ನಂತರ ಉಪಯೋಗಿಸಲು ಲಭ್ಯವಾಗುತ್ತದೆ.

ಊ) ಕಟ್ಟಡದ ವಿಸ್ತರಣೆ ಮತ್ತು ಹೊಸ ಬ್ಲಾಕ್‌ಗಳನ್ನು ಕಟ್ಟಿಡ ವಿನಹ ಸಾಕಷ್ಟು ಸ್ಥಳಾವಕಾಶವನ್ನು ಸೂಪರ್ ಸ್ಪೆಷಾಲಿಟಿ ವಿಭಾಗಕ್ಕೆ ಒದಗಿಸಲು ಸಾಧ್ಯವಾಗುವುದಿಲ್ಲ. ಆದಾಗ್ಯೂ ಹೊಸ ಕ್ಯಾಶುಯಾಲಿಟಿ ಬ್ಲಾಕ್ ಮತ್ತು ಹೆರಿಗೆ ವಿಭಾಗವನ್ನು ಆಧುನೀಕರಣಗೊಳಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು, ಇದರ ಬಗ್ಗೆ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು. ಮತ್ತು ಈ ಆಸ್ಪತ್ರೆಯಲ್ಲಿ ಇಂತಹ ವಿಭಾಗಕ್ಕೆ ಕನಿಷ್ಟ ಉಪಕರಣಗಳು ಬೇಕಾಗಿರುತ್ತದೆ. ಆದಾಗ್ಯೂ ಉತ್ತಮವಾದ ಉಪಕರಣಗಳನ್ನು ಈ ವಿಭಾಗಕ್ಕೆ ಕಾಲಕ್ರಮೇಣ ಒದಗಿಸಲಾಗುವುದು.

ಶ್ರೀ ಎ. ಕೆ. ಅನಂತ ಕೃಷ್ಣ.—ಮಾನ್ಯ ಅಧ್ಯಕ್ಷರೆ, ನಾಲ್ಕು ವರ್ಷಗಳಿಂದಲೂ ಈ ಪ್ರಶ್ನೆ ಹಾಕುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ನನ್ನ ಮಾನ ಮರ್ಯಾದೆ ಹರಾಜು ಆಗುತ್ತಿದೆ. ಇವರು ಉತ್ತರವನ್ನು ಬಹಳ ಚೆನ್ನಾಗಿ ಕೊಡುತ್ತಾರೆ. ಆಸ್ಪತ್ರೆಯಲ್ಲಿ ಏನಿದೆ ಏನಿಲ್ಲವೆಂದು ಆ ಆಸ್ಪತ್ರೆಗೆ ಬರುವ ರೋಗಿಗಳನ್ನು ಕೇಳಿದರೆ ಚೆನ್ನಾಗಿ ಗೊತ್ತಾಗುತ್ತದೆ. ಇದನ್ನು ಮಾನ್ಯ ಮಂತ್ರಿವರ್ಯರಿಗೂ ಸಾಕಷ್ಟು ಸಲ ಹೇಳಿದ್ದೇನೆ. ಹಿಂದಿನ ಮಂತ್ರಿಗಳಿಗೂ ಹೇಳಿದ್ದೇನೆ. ಅವರನ್ನು ಬೇಕಾದಷ್ಟು ಸಲ ಆಲ್ಲಿಗೆ ಕರೆದು ಕೊಂಡೂ ಹೋಗಿದ್ದೇನೆ. ಇವರು ಏನು ಹೇಳುತ್ತಾರೆ ಕೇಳಿ. Whether the Government is aware of most disgraceful state of affairs in the Bowring and Lady Curzon Hospital on account of the following ಎಂದರೆ, ಆಡ್ಮಿಟ್ ಮಾಡಿಕೊಳ್ಳುತ್ತಾರೆ. ಆದರೆ ಇಲ್ಲಿ 'ನೋ' ಎಂದು ಹೇಳುತ್ತಾರೆ. ಇಲ್ಲಿ ಅಡ್ಮಿಷನ್ ಇದೆ. Funds have been released for the day to day emergency needs of the Bowring and Lady Curzon Hospital ಅನ್ನುತ್ತಾರೆ. ಯಾವಾಗ ಎಂದು ಹೇಳಲಿಲ್ಲ, ನಾನು ಪ್ರಶ್ನೆ ಹಾಕಿದ ದಿನ ಆಲ್ಲಿ ಕ್ಯಾಷ್ ಬ್ಯಾಲೆನ್ಸ್ ೧೦೦ ರೂಪಾಯಿ ಕೂಡಾ ಇರಲಿಲ್ಲ. ಹಣ ರಿಲೀಸ್ ಮಾಡಿದ್ದೇವೆಂದು ಹೇಳಿದರೆ ಇದರ ಅರ್ಥ ಏನು? ಸತ್ಯದ ಆಧಾರದ ಮೇಲೆ ಕೊಡಬೇಕಾದ ಉತ್ತರ ಬಿಟ್ಟು ಯಾರ ಕಣ್ಣನ್ನು ಒರೆಸುವುದಕ್ಕೆ ಈ ಕೆಲಸ ಮಾಡುವುದು? ಯಾರಿಗಾಗಿ ಮಾಡುವುದು? ಮತ್ತೊಂದು ಹೇಳುತ್ತೇನೆ ನೋಡಿ, non-availability of medicines, bandage

cloth. dettol, injection vials, resulting in considerable loss to the poor patients in the hospital ಎಂದರೆ essential medicines, injections, bandage cloth, dettol are available in the hospital and a sum of Rs. 35.91 lakhs has been released towards drugs, chemicals, including bandage. ಆ ತರಹ ಹೇಳುತ್ತಾರೆ. ಆದಾದಮೇಲೆ ಆವರು ಉತ್ತರ ಕೊಡಲಿ ಬಿಡಲಿ, ನನ್ನ ಗೋಳನ್ನು ನಾನು ಹೇಳುತ್ತೇನೆ, ನಾವು ಕೊಟ್ಟಿದ್ದೇವೆಂದರೆ, ಯಾರಿಗೆ ಕೊಟ್ಟರು? ಯಾರಿಗೆ ರಿಲೀಸ್ ಮಾಡಿದರು? ಯಾವ ಆಸ್ಪತ್ರೆಗೆ ಕೊಟ್ಟರು? ಎಲ್ಲೋ ಕೊಟ್ಟಿದ್ದೆಲ್ಲಾ ಬೋರಿಂಗ್ ಆಸ್ಪತ್ರೆಗೆ ಕೊಡಲಾಗಿದೆ ಎಂದು ಅರ್ಥಾನಾ? ಈ ರಾಜ್ಯದ ಆಸ್ಪತ್ರೆಗಳಿಗೆಲ್ಲಾ ಎಷ್ಟು ಕೊಟ್ಟಿದ್ದೀರಾ ಎಂದು ಕೇಳಿಲ್ಲ. ಬೋರಿಂಗ್ ಅಂಡ್ ಲೇಡಿ ಕರ್ಜನ್ ಆಸ್ಪತ್ರೆಗೆ ಎಷ್ಟು ಕೊಟ್ಟಿದ್ದೀರಾ ಎಂದು ಕೇಳಿದ್ದು? ಏತಕ್ಕೆ ಕೊಟ್ಟಿಲ್ಲವೆಂದು ನೇರ ಉತ್ತರ ನಮಗೆ ಬೇಕು. It is stated that there is no shortage of doctors. ಅಲ್ಲ, ಇಷ್ಟು ಕೊಟ್ಟಿದ್ದರೆ ಯಾವಾಗ ಕೊಟ್ಟಿರಿ, ಎಷ್ಟು ಕೊಟ್ಟಿದ್ದೀರಿ, ಎಷ್ಟೂ ಕೊಟ್ಟಿಲ್ಲ, ಇಲ್ಲ ನೋಡಿ. ಪ್ರತಿಯೊಂದೂ ಹಾಗೆ ಇದೆ. "There is no shortage of doctors" ನಾನು ಹೇಳಿದ್ದೇನೆ ಇಲ್ಲಿ ಅಡ್ಜೋಕೇಟ್ ಡಾಕ್ಟರ್ಸ್ ಇಲ್ಲ ಎಂದು. ರಾತ್ರಿ ೧೧, ೧೨ ಗಂಟೆಗೆ ಜನ ನನ್ನ ಮನೆಗೆ ಫೋನ್ ಮಾಡುತ್ತಾರೆ, ಎಮರ್ಜೆನ್ಸಿಯಲ್ಲಿ ಡಾಕ್ಟರಿಲ್ಲ, ತೊಂದರೆಯಾಗುತ್ತಿದೆ ನೀವು ಬನ್ನಿ ಎನ್ನುತ್ತಾರೆ. ಜನಗಳ ಮಾತುಗಳ ಕೇಳಿ ನಾನು ಹೋಗಬೇಕೇ? ಅಂದರೆ ಡಾಕ್ಟರ್ ಇದ್ದರೂ ಅಲ್ಲಿ ಕೆಲಸ ಮಾಡುತ್ತಿಲ್ಲವೆಂದು ತಿಳಿಯಬಹುದೇ? ಅಲ್ಲಿ ಡಿಸಿಪ್ಲಿನ್ ಎನ್‌ಫೋರ್ಸ್ ಮಾಡುವುದಕ್ಕೆ ಯಾರೂ ಇಲ್ಲವೇ? ಡಾಕ್ಟರ್‌ಗಳು ಅಷ್ಟು ಇನ್‌ಡಿಸಿಪ್ಲಿನ್ ಆಗಿದ್ದಾರೆಯೇ ಜನಗಳ ಚಿಕಿತ್ಸೆಗೆ ಸಮಯದಲ್ಲಿ ಏಕೆ ಸಿಗುತ್ತಿಲ್ಲ ಎನ್ನುವುದು ಮೂಲಭೂತ ಪ್ರಶ್ನೆ. ಆ ಆಸ್ಪತ್ರೆಯಲ್ಲಿ ಬೋರ್ಡ್ ಆಫ್ ವಿಸಿಟರ್ಸ್‌ಗೆ ಛೇರ್ಮನ್ ಬೇರೆ ಆಗಿದ್ದೇನೆ. ಸಾಲದ್ದಕ್ಕೆ, ನಾನಲ್ಲಿ ಎಂಎಲ್‌ಎ ಆಗಿ ಉಳಿದುಕೊಳ್ಳಬೇಕಾ? ಛೇರ್ಮನ್ನಾಗಿ ಉಳಿದುಕೊಳ್ಳಬೇಕಾ? ನಾಗರೀಕನಾಗಿ ನಾಗರೀಕರಾದ ಜವಾಬ್ದಾರಿ ಕೊಡಬೇಕಾ? ಈ ತರಹ ಜವಾಬು ಕೊಟ್ಟರೆ ಅರ್ಥ ಏನಿದೆ? "Hospital has been provided with two ambulances" ಅಂತಾರೆ,ಜನ ಕೇಳಿದಾಗ ಒಂದು ಆಂಬುಲೆನ್ಸ್ ಕೈಗೆ ಸಿಕ್ಕುವುದಿಲ್ಲ. ಆಂಬುಲೆನ್ಸ್ ಇರಬಹುದು, ಶೆಡ್‌ನಲ್ಲಿರಬಹುದು, ವರ್ಕ್‌ಶಾಪ್‌ನಲ್ಲಿರಬಹುದು ಮತ್ತೊಂದು ಕಡೆ ಇರಬಹುದು. Is the ambul nce available for the service of the people? Even to the extent if a patient has to be removed from Bowring Hospital to Jayadeva Hospital, there is no ambulance available.

ಶ್ರೀ ಜಿ. ರಾಮಕೃಷ್ಣ.—ಇದರಲ್ಲಿ ಯಾರದು ಕಿಮ್ಮತ್ತು ಹೋಗತಕ್ಕಂಥದ್ದು ಏನೂ ಇಲ್ಲ ಅಲ್ಲಿ ನನ್ನ ಕಿಮ್ಮತ್ತು ಹೋಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದರು. ಸರ್ಕಾರ ಪ್ರತಿಯೊಂದು ಆಸ್ಪತ್ರೆಗೆ ಮಾಡಲೇಬೇಕಾದ್ದನ್ನು ಮಾಡುತ್ತದೆ. ಸದಸ್ಯರು ಅಲ್ಲಿ ವಿಸಿಟರ್ಸ್ ಕಮಿಟಿಯ ಛೇರ್ಮನ್ ಇದ್ದಾರೆ, ಕ್ಯಾಶ್ ಬ್ಯಾಲೆನ್ಸ್ ಬಗ್ಗೆ ಆವರು ಹೇಳುತ್ತಿದ್ದಾರೆ, ಯಾವಾಗಲೂ ವಿಸಿಟರ್ಸ್ ಕಮಿಟಿ ಛೇರ್ಮನ್‌ಗೆ ಕ್ಯಾಷ್ ಬ್ಯಾಲೆನ್ಸ್ ತೋರಿಸುವುದಿಲ್ಲ, ಇಷ್ಟು ಕ್ಯಾಷ್ ಬ್ಯಾಲೆನ್ಸ್ ಇದೆ ನೋಡ್ರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅದ್ದರಿಂದ ಕ್ಯಾಸ್ ಬ್ಯಾಲೆನ್ಸ್ ಬಗ್ಗೆ ಏನು ಹೇಳಿದರು ಅದು ಸರಿಯಲ್ಲ. ನೇರವಾಗಿ ಖರೀದಿ ಮಾಡುವುದಕ್ಕಾಗಿ ಮೊದಲನೇ ಸಲ ೧೮ ಲಕ್ಷ ರಿಲೀಸ್ ಮಾಡಿದ್ದೇವೆ. ಪುನಃ ೧೭ ಸಾವಿರ ಮತ್ತು ೭ ಸಾವಿರ ಒಟ್ಟು ೨೪ ಲಕ್ಷ ಹೀಗೆ ೪೨ ಲಕ್ಷ ರೂಪಾಯಿಗಳನ್ನು ನೇರವಾಗಿ ಖರೀದಿ ಮಾಡುವುದಕ್ಕೆ ಕೊಟ್ಟಿದ್ದೇವೆ. ಇನ್ನು ೬೦ ಪರ್ಸೆಂಟ್ ಮಳಿಗೆಯಿಂದ ಖರೀದಿ ಮಾಡುವ ಪಂಥದು ೫೩ ಲಕ್ಷ, ಈ ಪ್ರಶ್ನೆ ಬರುವ ಮುಂಚೆ ನಾನು ಆಫೀಸರುಗಳ ಸೂಪರಿಂಟೆಂಡರನ್ನು ಕರೆದು, ಈ ರೀತಿ ಸದಸ್ಯರು ಅಲ್ಲಿ ಛೇರ್ಮನ್ನರಾಗಿರುವುದರಿಂದ ಅಲ್ಲಿ ಬಹಳಷ್ಟು ವಿಶೇಷ ಗಮನ ಕೊಟ್ಟು ಏನು ಗೊಂದಲ ಇದೆ ಎಂದು ಕೇಳಿರಿ ಮೇಲೆ ಆವರು ವಿವರ ಕೊಟ್ಟರು. ಯಾವುದೇ ತೊಂದರೆ ಇಲ್ಲ, ಹಣದ ತೊಂದರೆ ಇಲ್ಲ, ಔಷಧದ ತೊಂದರೆ ಇಲ್ಲ, ಬ್ಯಾಂಡೇಜಿಗೂ ತೊಂದರೆ ಇಲ್ಲ ಎಂಬ ಮಾತು ಹೇಳಿದರು. ಆದಕ್ಕಾಗಿ ಆಸ್ಪತ್ರೆಯಲ್ಲಿ ಯಾವುದೊಂದೂ ತೊಂದರೆ ಇಲ್ಲ. ಇನ್ನು ಡಾಕ್ಟರ್ಸ್ ಇಲ್ಲ ಎಂದು ಹೇಳಿದ್ದಾರೆ. ಮೆಡಿಕಲ್ ಕಾಲೇಜಿನಿಂದ ಆ ಆಸ್ಪತ್ರೆಗೆ ಎಷ್ಟು ಡಾಕ್ಟರ್ ಬೇಕೋ ಅಷ್ಟಕ್ಕಿಂತ ಜಾಸ್ತಿ ನಾವು ಇಟ್ಟುಕೊಳ್ಳಿಸಿಕೊಟ್ಟಿದ್ದೇವೆ. ಇನ್ನು ಸಿ ಮತ್ತು ಡಿ ಗ್ರೂಪಿನ ಕೆಲವು ಹುದ್ದೆಗಳು ತುಂಬಬೇಕಾಗಿದೆ. ಶೀಘ್ರವಾಗಿ ಅವನ್ನು ತುಂಬುತ್ತೇವೆ ಡಾಕ್ಟರ್ ಬಗ್ಗೆ ಯಾವ ತೊಂದರೆ ಕೊರತೆನೂ ಇಲ್ಲ. ಮತ್ತೆ ಅಲ್ಲಿ ಬೇಕಾದಷ್ಟು ಔಷಧಿ ಎಲ್ಲ ತರಹದ್ದೂ ಇದೆ. ಔಷಧಿ ಕೊರತೆ ಇಲ್ಲ ಎಂಬುದನ್ನು

ಸ್ಪಷ್ಟವಾಗಿ ಸದಸ್ಯರಿಗೆ ತಿಳಿಸುತ್ತೇನೆ. ಮತ್ತು ವಿಶೇಷವಾಗಿ ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಹೆಚ್ಚಿನ ಸೌಲಭ್ಯವುಳ್ಳಂತಹ ಒಂದು ಸ್ಪೆಶಲ್ ವಾರ್ಡ್ ಮತ್ತು ಶೀತಲೀಕರಣ ಹೊಂದಿದ ಶವಾಗಾರ, ಇದು ಬೆಂಗಳೂರು ನಗರದಲ್ಲಿ ಅಪ್‌ಗ್ರೇಡಾಗಿದೆ, ೧೧೬ ಲಕ್ಷ ರೂಗಳದ್ದು, ಇದನ್ನು ೧೯೪೪-೪೫ರ ಸಾಲಿಗೆ ತೆಗೆದುಕೊಳ್ಳುತ್ತೇವೆ. ಈ ವಿಶೇಷ ಶವಾಗಾರದಲ್ಲಿ ವಿಶೇಷವಾದ ಉಪಕರಣ ಜೋಡಿಸಿ ಮಾಡುತ್ತಿದ್ದೇವೆ. ಮತ್ತು ಇನ್ನೊಂದು ಫಾರ್ಮಸಿ ಮತ್ತು ಶಸ್ತ್ರ ಚಿಕಿತ್ಸೆ ಕಟ್ಟಡ, ಇದು ೩೫೨.೫೦ ಲಕ್ಷ, ಇದೂ ಸಹಿತ ೧೯೪೪-೪೫ರಲ್ಲಿ ಈಗಾಗಲೇ ಆಡಳಿತಾತ್ಮಕ ಅಪ್ರೂವಲ್ ಸಿಕ್ಕಿದೆ, ಈ ವಿಶೇಷ ಕಟ್ಟಡವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಇವುಗಳಿಂದ ಈ ರಾಜ್ಯದ ಜನತೆಗೆ ಹೆಚ್ಚಿನ ಸೌಕರ್ಯ ಸಿಗಲಿ ಎಂದು ಸರ್ಕಾರ ಈ ಕಾರ್ಯಕ್ರಮ ಹಾಕಿಕೊಂಡಿದೆ. ಮತ್ತೆ ಸದಸ್ಯರು ಹೇಳುವುದು ಔಷಧಿ ಇಲ್ಲ ಎಂದು, ಈಗಾಗಲೇ ಹೇಳಿದ್ದೇನೆ ಔಷಧಿ ಹೆಚ್ಚಿನ ಪ್ರಮಾಣದಲ್ಲಿದೆ, ವ್ಯವಸ್ಥೆಯೂ ಚೆನ್ನಾಗಿದೆ. ಡಾಕ್ಟರೂ ಸರಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಇನ್ನೊಂದು ಪ್ರಶ್ನೆಯಲ್ಲಿ ಎರಡು ಅಂಬುಲೆನ್ಸ್ ಇದ್ದು ಒಂದು ರಿಪೇರಿ ಇದೆ, ಇನ್ನೊಂದು ಕೆಲಸ ಮಾಡುತ್ತಿದೆ, ಅದರ ಬಗ್ಗೆನೂ ಯಾವ ತೊಂದರೆ ಇಲ್ಲ. ಒಟ್ಟಾರೆ ಹೇಳಬೇಕಾದರೆ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವುದು, ಅಲ್ಲಿರುವ ರೋಗಿಗಳಿಗೆ ಸವಲತ್ತು ಸಿಗುವ ಬಗ್ಗೆ ಪ್ರತಿಯೊಂದು ಹಂತದಲ್ಲೂ ವ್ಯವಸ್ಥಿತ ರೀತಿಯಲ್ಲಿ ಮಾಡುತ್ತಿದ್ದೇವೆ. ಇವುಗಳ ಬಗ್ಗೆ ಯಾವ ಕೊರತೆ ಅಲ್ಲಿಲ್ಲ ಎಂದು ತಮ್ಮ ಮೂಲಕ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಎ. ಕೆ. ಅನಂತಕೃಷ್ಣ.—ರಾತ್ರಿ ೧೨ ಗಂಟೆಗೆ ಜನ ನನಗೆ ಫೋನ್ ಮಾಡಿ ಹೇಳುತ್ತಾರೆ ಔಷಧಿ ಸಿಗುತ್ತಿಲ್ಲ, ಏಮರ್ಜೆನ್ಸಿ ಕೇಸಿಗೆ ಇಂಜೆಕ್ಷನ್ ಸಿಗುತ್ತಿಲ್ಲ ಎಂದು. ಹೊರಗಡೆ ಹೋಗಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ, ಬ್ಯಾಂಡೇಜ್ ಸ್ವಾಬಿಕಲ್ಲ ಎಂದು ಹೇಳುತ್ತಿದ್ದಾರೆ. ಇದೆಲ್ಲಾ ನಾನು ಪ್ರಶ್ನೆ ಹಾಕುವುದಕ್ಕೆ ಮುಂಚಿನ ಪರಿಸ್ಥಿತಿ, ಇದಾದ ಮೇಲೆ ತಾವು ಕಳುಹಿಸಿಕೊಟ್ಟಿದ್ದರೆ ಅದಕ್ಕೆ ನಾನು ಜವಾಬ್ದಾರಿ ಅಲ್ಲ ಅಮತ್ತಿನ ಪರಿಸ್ಥಿತಿ ಏನಿತ್ತೋ ಅದನ್ನು ಗಮನಕ್ಕೆ ತಂದಿದ್ದೇನೆ. ಇನ್ನು ಮುಖ್ಯವಾಗಿ ಹೇಳಬೇಕಾದರೆ ಸರ್ಜನ್‌ಗೆ ಗ್ಲೌಸ್‌ಗಳಿರಲಿಲ್ಲ. ನನ್ನ ಗಮನಕ್ಕೆ ತಂದಿದ್ದೇನೆ ಏನು ಮಾಡಿದರು ಎಂದು ಹೇಳಿ ಕೊಳ್ಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಎಲ್ಲಾ ಚೆನ್ನಾಗಿದೆ ಎಂದು ಹೇಳಿದರೆ ಇನ್ನೂ ಮುಂದೆ ಇಂತಹ ಪ್ರಶ್ನೆ ಹಾಕಬೇಕಾದದ್ದೂ ಇಲ್ಲ. ನಿಮ್ಮ ಉತ್ತರ ತೆಗೆದುಕೊಂಡು ಆ ಜನರಿಗೆ ಯಾವ ಪ್ರಗತಿಯನ್ನು ಸಾದನೆ ಮಾಡುವುದಕ್ಕೂ ಆಗುವುದಿಲ್ಲ

ಶ್ರೀ ಎಂ. ಮುನಿಸ್ವಾಮಿ.—ಈ ಬೌರಿಂಗ್ ಆಸ್ಪತ್ರೆ ಇರುವುದು ಸಿವಿಲ್ ಏರಿಯಾದಲ್ಲಿ ಇದು ಬರೀ ಶಿವಾಜಿನಗರ ಕ್ಷೇತ್ರಕ್ಕೆ ಸೇರಿದ್ದಲ್ಲ ಅಲ್ಲಿರುವ ನಾಲ್ಕು ಅಸೆಂಬ್ಲಿ ಕ್ಷೇತ್ರಗಳಿಗೆ ಸೇರಿದ್ದುದು. ಈಗ ಈಗ ಸನ್ಮಾನ್ಯ ಶ್ರೀ ಅನಂತಕೃಷ್ಣ ಏನೂ ಎತ್ತಿದ್ದಾರೆ ಅದು ಸತ್ಯ ಎಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಹೇಳುವುದು ಸತ್ಯಕ್ಕೆ ದೂರವಾಗಿದೆ. ಪ್ರತಿಯೊಬ್ಬ ಬಡವ ಆಸ್ಪತ್ರೆಗೆ ಹೋದರೆ ಅಲ್ಲಿ ಟಿಂಚರಿಲ್ಲ ಬ್ಯಾಂಡೇಜಿಲ್ಲ, ಯಾವುದೇ ಔಷಧಿ ಅವರೂ ಬರೆದು ಕೊಟ್ಟು ಆಚೆ ತೆಗೆದುಕೊಂಡು ಬಾ, ದುಡ್ಡು ಕೇಳುತ್ತಿದ್ದಾರೆ ಸ್ವಾಮಿ, ಇಂತಹ ಪರಿಸ್ಥಿತಿ ಇದೆ. ಮಾನ್ಯ ಮಂತ್ರಿಗಳು ಹೇಳುವುದರಲ್ಲಿ ಸತ್ಯವಿಲ್ಲ ದಯಾ ಮಾಡಿ ಅದನ್ನು ಸರಿಪಡಿಸಲೇಬೇಕು. ಇದು ಬಡ ಜನಕ್ಕೆ ತೀರಾ ಅನ್ಯಾಯವಾಗಿರುವಂಥದು.

ಶ್ರೀ ಜಿ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ಇವರಿಗೂ ಮೊದಲು ನಾನು ಆಲ್ಲಿಗೆ ಸ್ವಂತ ಬೇಟಿ ಕೊಟ್ಟಿದ್ದೇನೆ ಅವರು ಅಲ್ಲಿ ಛೇರ್ಮನ್‌ರಾಗಿರುವುದರಿಂದ ನೇರವಾಗಿ ಇಂಥವರಿಗೆ ಈ ರೀತಿ ಆಗಿದೆ ಎಂದು ಹೇಳಿದರೆ ಸರಿ ನೂರಾರು ಮಂದಿ ನಮ್ಮ ಮನೆಗೆ ಫೋನ್ ಮಾಡುತ್ತಾರೆ, ಯಾವ ರೋಗಿಯನ್ನೂ ಯಾರೂ ನೋಡುವುದಿಲ್ಲ ಎಂದು ಹೇಳುವುದಕ್ಕಿಂತ ನಿರ್ದಿಷ್ಟವಾಗಿ ಹೇಳಬೇಕು ನಾನು ಹೇಳುವುದಿಷ್ಟೆ. ಜನರಲ್ಲಾಗಿ ಹೀಗೆ ಆಗುತ್ತಿದೆ ಎಂದು ಹೇಳಿದರೆ ತಕ್ಷಣ ನಾವು ಯಾರು ಮೇಲೂ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನೇರವಾಗೀ ಇಂಥವರಿಗೆ ಹೀಗಾಗಿದೆ ಎಂದು ಹೇಳಿದರೆ ನಾವು ಏನಾದರೂ ಮಾಡಬಹುದು ಆ ರೀತಿ ಹೇಳಿದರೆ ಅದನ್ನು ಪರಿಶೀಲನೆ ಮಾಡಿ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ವಿಶೇಷವಾಗಿ ಹೇಳುತ್ತೇನೆ, ಇಬ್ಬರು ಸದಸ್ಯರನ್ನು ಕರೆದುಕೊಂಡು ನಾಳೆನೇ ಬೇಕಾದರೆ ಆಸ್ಪತ್ರೆಗೆ ಭೇಟಿ ಕೊಡುತ್ತೇನೆ.